(ಇಂದು ದಿನಾಂಕಃ 10-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಜೆ.ಪಿ.ಎ ವಕೀಲರಿಂದ ಪ್ರತಿವಾದಿಯ ಪರಃ</u>**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿರುತ್ತವೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

2. ಎಮ ಆರ ನಂಬರ 125/2003-24 ಹಾಜರುಪಡಿಸಿದ್ದು ಅದನ್ನು ನಿ.ಡಿ-69 ಎಂದು, ಗುರುತಿಸಲಾಯಿತು. ಎಮ ಆರ ನಂಬರ 124/2003-24 ಹಾಜರುಪಡಿಸಿದ್ದು ಅದನ್ನು ನಿ.ಡಿ-70 ಎಂದು, ಗುರುತಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ. ಎಸ ವಕೀಲರಿಂದ :</u>**

1. ನನ್ನ ಅಜ್ಜ ಗಂಡಪ್ಪರವರಿಗೆ ಒಟ್ಟು 9 ಜನ ಮಕ್ಕಳು ಇದ್ದರು. ಅವರೆಲ್ಲರ ಹೆಸರು ನನಗೆ ಗೊತ್ತಿದೆ. ಅವರ ಹೆಸರು ಬಸವರಾಜಪ್ಪ, ಸುಭಾಷ, ಶಾಮರಾವ, ಸುಬ್ಬಮ್ಮ, ನಾಗೇಂದ್ರಪ್ಪ, ಜಗದೇವಿ, ಶಾಂತಪ್ಪ, ನಾಗಮಣಿ , ಚಂದ್ರಕಾಂತ ಇರುತ್ತದೆ. ಇವರಪೈಕಿ ನಾಗೇಂದ್ರಪ್ಪ ತೀರಿಕೊಂಡಿರುತ್ತಾರೆ ಎಂದರೆ ಸರಿ. ಗಂಡಪ್ಪರವರು ತೀರಿಕೊಳ್ಳುವಾಗ ಅವರ ಕುಟುಂಬಕ್ಕೆ ಎಷ್ಟು ಆಸ್ತಿ ಇತ್ತು ಎಂದರೆ ಸಾಕ್ಷಿ ರಾಮತೀರ್ಥದಲ್ಲಿ 7 ಆಸ್ತಿ, ಹಲಚೇರಾದಲ್ಲಿ ನಾಗೇಂದ್ರಪ್ಪರವರ ಹೆಸರಿನಲ್ಲಿ 2 ಆಸ್ತಿ ಬರುತ್ತದೆ, ಅಂಬರೀಶರವರ ಹೆಸರಿನಲ್ಲಿ 1 ಆಸ್ತಿ ಮತ್ತು ಚಂದ್ರಕಾಂತರವರ ಹೆಸರಿನಲ್ಲಿ 1 ಆಸ್ತಿ ಇತ್ತು ಎಂದು ಹೇಳುತ್ತಾರೆ. ಇಷ್ಟೆ ಆಸ್ತಿಗಳು ಗುಂಡಪ್ಪನ ಕುಟುಂಬಕ್ಕೆ ಇದ್ದ ಆಸ್ತಿ ಇರುತ್ತವೆ. ಗಂಡಪ್ಪರವರು ರಾಮತೀರ್ಥದಲ್ಲಿ ಮೃತಪಟ್ಟಿದ್ದು ಅವರ ಅಂತ್ಯಸಂಸ್ಕಾರ ರಾಮತೀರ್ಥದಲ್ಲಿ ಆಗಿರುತ್ತದೆ. ಅಕ್ಕಮರವರು ರಾಮತೀರ್ಥದಲ್ಲಿ

ಮೃತಪಟ್ಟಿದ್ದು ಅವರ ಅಂತ್ಯಸಂಸ್ಕಾರ ರಾಮತೀರ್ಥದಲ್ಲಿ ಆಗಿರುತ್ತದೆ. ರಾಮತೀರ್ಥದಲ್ಲಿ 7 ಆಸ್ತಿ ಆಗಿದ್ದು ಅದರ ಸರ್ವೆ ನಂಬರ ಏನು ಎಂದರೆ ಸಾಕ್ಷಿ ಸರ್ವೆ ನಂಬರ 10 ಬೆಡಗಪಳ್ಳಿ ಆಸ್ತಿ ಅದರಲ್ಲಿ 10/1 ಮತ್ತು 10/2 ಇರುತ್ತದೆ, ಸರ್ವೆ ನಂಬರ 33 ರಾಮತೀರ್ಥದಲ್ಲಿ ಇದ್ದು ಅದರಲ್ಲಿ 2 ಆಸ್ತಿ ಇರುತ್ತದೆ, ಸರ್ವೆ ನಂಬರ 58 ರಲ್ಲಿ 2 ಆಸ್ತಿಗಳು ರಾಮತೀರ್ಥದಲ್ಲಿ ಇರುತ್ತವೆ, ಸರ್ವೆ ನಂಬರ 9 ರಲ್ಲಿ 1 ಆಸ್ತಿ, ಒಂದು ಮನೆ, ಒಂದು ದೊಡ್ಡಿ, ಹಣಮಂತ ದೇವಸ್ಥಾನದ ಹತ್ತಿರ ಎರಡು ದೊಡ್ಡ ನಿವೇಶನ ಇರುತ್ತವೆ. ಒಂದು ದೊಡ್ಡಿ, ಹಣಮಂತ ದೇವಸ್ಥಾನದ ಹತ್ತಿರ ಎರಡು ದೊಡ್ಡ ನಿವೇಶನ ಸರಕಾರದ ಜಮೀನು ಆಗಿದ್ದು ಗುಂಡಪ್ಪನ ಕುಟುಂಬದವರು ದನಗಳನ್ನು ಕಟ್ಟುವ ಸಲುವಾಗಿ ತಾತ್ಕಾಲಿಕವಾಗಿ ಉಪಯೋಗಿಸುತ್ತಿದ್ದು ಆ ಜಮೀನಿನುಗಳಿಗು ಮತ್ತು ಗುಂಡಪ್ಪನ ಕುಟುಂಬಕ್ಕು ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಒಂದು ದೊಡ್ಡಿ ಮತ್ತು ಹಣಮಂತ ದೇವಸ್ಥಾನದ ಹತ್ತಿರ ಎರಡು ದೊಡ್ಡ ನಿವೇಶನ ಪಂಚಾಯಿತಿ ನಂಬರ ಆಗಿರುವುದಿಲ್ಲ. ಒಂದು ದೊಡ್ಡಿ, ಹಣಮಂತ ದೇವಸ್ಥಾನದ ಹತ್ತಿರ ಎರಡು ದೊಡ್ಡ ನಿವೇಶನ ಸರಕಾರದ ಜಮೀನು ಆಗಿದ್ದು ಗುಂಡಪ್ಪನ ಕುಟುಂಬದವರು ದನಗಳನ್ನು ಕಟ್ಟುವ ಸಲುವಾಗಿ ತಾತ್ಕಾಲಿಕವಾಗಿ ಉಪಯೋಗಿಸುತ್ತಿದ್ದು ಆ ಜಮೀನಿನುಗಳಿಗು ಮತ್ತು ಗುಂಡಪ್ಪನ ಕುಟುಂಬಕ್ಕು ಯಾವುದೇ ಸಂಬಂಧ ಇಲ್ಲ ಆದ್ದರಿಂದ ಪಂಚಾಯಿತಿಯಲ್ಲಿ ಆ ಆಸ್ತಿಗಳ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಹಲಚೇರಾದಲ್ಲಿ ಎಷ್ಟು ಜಮೀನು ಇದೆ ಎಂದರೆ ಸಾಕ್ಷಿ ಸರ್ವೆ ನಂಬರ 12, ಸರ್ವೆ ನಂಬರ 98 ಚಂದ್ರಕಾತರವರ ಹೆಸರಿನಲ್ಲಿ ಇದೆ, ಸರ್ವೆ ನಂಬರ 186 ನಾಗೇಂದ್ರಪ್ಪರವರ ಹೆಸರಿನಲ್ಲಿ ಇದೆ, ಸರ್ವೆ ನಂಬರ 98 ರಲ್ಲಿಯೆ ಇನ್ನೊಂದು ಅಂಬರೀಶರವರ ಹೆಸರಿನಲ್ಲಿ ಇದೆ, ಸರ್ವೆ ನಂಬರ 12 ನಾಗೇಂದ್ರಪ್ಪರವರ ಹೆಸರಿನಲ್ಲಿ ಇದೆ. ಈ ಮೇಲೆ ಹೇಳಿರುವ ಎಲ್ಲಾ ಜಮೀನುಗಳು ಗಂಡಪ್ಪರವರಿಗೆ ಹೇಗೆ ಬಂತು ಎಂರದೆ ಸಾಕ್ಷಿ

ಅವರು ಖರೀದಿ ಮಾಡಿರುವ ಆಸ್ತಿ ಇದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಸರ್ವೆ ನಂಬರ 12 ನಾಗೇಂದ್ರಪ್ಪರವರ ಹಸೆರಿನಲ್ಲಿ ಇತ್ತು, ಸರ್ವೆ ನಂಬರ 98 ರಲ್ಲಿಯೆ ಇನ್ನೊಂದು ಅಂಬರೀಶರವರ ಹೆಸರಿನಲ್ಲಿ ಇದೆ,ಸರ್ವೆ ನಂಬರ 98 ರಲ್ಲಿಯೆ ಇನ್ನೊಂದು ಚಂದ್ರಕಾಂತರವರ ಹೆಸರಿನಲ್ಲಿ ಇದೆ, ಸರ್ವೆ ನಂಬರ 186 ನಾಗೇಂದ್ರರವರ ಹೆಸರಿನಲ್ಲಿ ಇದೆ ಈ ಜಮೀನುಗಳು ಗುಂಡಪ್ಪರವರು ಖರೀದಿ ಮಾಡಿದ ಜಮೀನು ಇರುತ್ತದೆ. ಆಸ್ತಿಗಳನ್ನು ಖರೀದಿ ಮಾಡುವಷ್ಟು ನನ್ನ ಮುತ್ಯನ ಕುಟುಂಬ ಸುಸ್ತಿಯಲ್ಲಿ ಇತ್ತು ಎಂದರೆ ಸಾಕ್ಷಿ ಅಷ್ಟೇನು ಇರಲಿಲ್ಲ ಎಂದು ಹೇಳುತ್ತಾರೆ. ಆರ್ಥಿಕವಾಗಿ ಸದೃಢವಾಗಿದ್ದರು ಆಸ್ತಿಗಳನ್ನು ಖರೀದಿ ಮಾಡುತ್ತಾರೆ, ಆಥಿರ್ಕವಾಗಿ ದುರ್ಬಲ ವಿದ್ದವರು ಆಸ್ತಿಗಳನ್ನು ಖರೀದಿ ಮಾಡುವುದಿಲ್ಲ ಎಂದರೆ ಸಾಕ್ಷಿ ದುರ್ಬಲವಾಗಿದ್ದರು ಸಹ ಜಮೀನುಗಳ ಬೆಲೆ ಕಡಿಮೆ ಇದ್ದರೆ ಖರೀದಿ ಮಾಡುತ್ತಾರೆ ಎಂದು ಹೇಳುತ್ತಾರೆ. ನನ್ನ ಮುತ್ಯ ಆರ್ಥಿಕವಾಗಿ ಸದೃಢವಾಗಿದ್ದರು ಆದ್ದರಿಂದ 5 ಸರ್ವೆ ನಂಬರ ಜಮೀನುಗಳನ್ನು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ಮುತ್ಯ ಬದುಕಿರುವವರೆಗೂ ಅವರ ಹತ್ತಿರ ಎತ್ತುಗಳು ಮತ್ತು ಕೆಲಸಗಾರರು ಇದ್ದರು ಎಂದರೆ ಸರಿ. ನನ್ನ ಮುತ್ಯ ಮೃತಪಟ್ಟಾಗ ಅವರಿಗೆ ಅಂದಾಜು 70 ವರ್ಷ ಮೇಲಪಟ್ಟಾಗಿತ್ತು.

2. ನನ್ನ ಮುತ್ಯನ 9 ಜನ ಮಕ್ಕಳ ಪೈಕಿ ಓದಿ ನೌಕರಿ ಮಾಡುತ್ತಿದ್ದವರು ನನ್ನ ತಂದೆ ಒಬ್ಬರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲರೂ ಓದಿರುತ್ತಾರೆ ಎಂದು ಹೇಳುತ್ತಾರೆ. ನನ್ನ ತಂದೆ ಕಂದಾಯ ಇಲಾಖೆಯಲ್ಲಿ ಇದ್ದರು ಎಂದರೆ ಸರಿ. ನನ್ನ ತಂದೆ ನಿವೃತ್ತಿ ಹೊಂದಿ 14 ವರ್ಷ ಆಗಿರುತ್ತದೆ. ನನ್ನ ತಂದೆಗೆ ನೌಕರಿ ಬಂದ ನಂತರ ನನ್ನ ಮುತ್ಯ ಮನೆಯ ಎಲ್ಲಾ ಕಾರುಬಾರ ನನ್ನ ತಂದೆಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ಮುತ್ಯನ 9 ಜನ ಮಕ್ಕಳ ಪೈಕಿ ಪಾಲು ಮಾಡಿಕೊಂಡು ಸುಬ್ಬಮ್ಮರವರಿಗೆ ಏನಾದರು ಪಾಲು ಕೊಟ್ಟ ಬಗ್ಗೆ ನಾನು ನ್ಯಾಯಾಲಯಕ್ಕೆ

ಯಾವುದೇ ದಾಖಲೆ ಸಲ್ಲಿಸಿಲ್ಲ. ನಾನು ಸಲ್ಲಿಸಿರುವ 2-3 ದಾವೆಗಳ ಡಿಕ್ರಿಗಳಲ್ಲಿ ಸುಬ್ಬಮ್ಮ ಪಕ್ಷಗಾರರಾಗಿರಲಿಲ್ಲ ಎಂದರೆ ಸರಿ. ನಾನು ಸಲ್ಲಿಸಿರುವ 2-3 ದಾವೆಗಳ ಡಿಕ್ರಿಗಳಲ್ಲಿ ಸುಬ್ಬಮ್ಮ ಪಕ್ಷಗಾರರಾಗಿರಲಿಲ್ಲ ಆದ್ದರಿಂದ ಅವಳಿಗೆ ಅದರ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸಾಕ್ಷಿ ಇದ್ದಿರ ಬಹುದು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು 15 ನೇ ಪ್ರತಿವಾದಿ ವಾದಿಯ ಅಳಿಯ ಇರುತ್ತಾನೆ ಆದ್ದರಿಂದ ಅವರಿಗೆ ಮಾಹಿತಿ ಇರಬಹುದು ಎಂದು ಹೇಳುತ್ತಾರೆ. ಅಸಲು ದಾವೆ ಸಂಖ್ಯೆ 157/2014 ರ ದಾವೆಯನ್ನು ಸುಬ್ಬರವರನ್ನು ಬಿಟ್ಟು ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಖರೀದಿ ಮಾಡಿರುವ ಆಸ್ತಿ ಇತ್ತು ಎಂದು ಹೇಳುತ್ತಾರೆ. ಅಸಲು ದಾವೆ ಸಂಖ್ಯೆ 157/2014 ರಲ್ಲಿ ಇರುವ ದಾವಾ ಸ್ವತ್ತನ್ನು ಈ ಪ್ರಸ್ತುತ ದಾವೆಯಲ್ಲಿ ದಾವಾ ಆಸ್ತಿ ಎಂದು ತೋರಿಸಿದ್ದರು ಎಂದು ನನಗೆ ಗೊತ್ತಿತ್ತು ಎಂದರೆ ಸರಿ. ನಾಗೇಂದ್ರಪ್ಪರವರು ನನ್ನ ತಂದೆಯ ವಿರುದ್ಧ ಒಂದು ದಾವೆ ಸಲ್ಲಿಸಿದ್ದರು ಎಂದರೆ ಸರಿ. ವಾದಿಯನ್ನು ನಾಗೇಂದ್ರಪ್ಪರವರು ನನ್ನ ತಂದೆಯ ವಿರುದ್ಧ ಸಲ್ಲಿಸಿರುವ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ನಾಗೇಂದ್ರಪ್ಪರವರು ಮಾಡಬೇಕು ಎಂದು ಹೇಳುತ್ತಾರೆ. ನಾಗೇಂದ್ರಪ್ಪರವರು ನನ್ನ ತಂದೆಯ ವಿರುದ್ಧ ಸಲ್ಲಿಸಿರುವ ದಾವೆಯಲ್ಲಿ ನನ್ನ ತಂದೆ ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದರೆ ಸರಿ. ನನ್ನ ತಂದೆ ಪ್ರತಿವಾದ ಪತ್ರದಲ್ಲಿ ಈ ದಾವೆ ನಡೆದ ಬಗ್ಗೆ ಬರೆದಿಲ್ಲ ಎಂದರೆ ಸಾಕ್ಷಿ ಬರೆದಿರಬಹುದು ನೆನಪಿಲ್ಲ ಎಂದು ಹೇಳುತ್ತಾರೆ. ಈ ಎರಡು ದಾವೆಗಳನ್ನು ನಾವು ಒಟ್ಟು ಮಿಲಾಪಿಯಾಗಿ ಡಿಕ್ರಿ ಪಡೆದುಕೊಂಡಿದ್ದು ಅದರ ಬಗ್ಗೆ ವಾದಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ನಾಗೇಂದ್ರಪ್ಪರವರು ನನ್ನ ತಂದೆಯ ವಿರುದ್ಧ ಸಲ್ಲಿಸಿರುವ ದಾವೆಯಲ್ಲಿ ಹಾಜರಾದರೆ ಸತ್ಯ ಹೊರಬಹುತ್ತದೆ ಎಂದು ನಾವು ಹಾಜರಾಗಿಲ್ಲ ಎಂದರೆ ಸಾಕ್ಷಿ ನಾವು ಹಾಜರಾಗಿರುತ್ತೇವೆ ಅವರು ಬಂದಿಲ್ಲ ಎಂದು ಹೇಳುತ್ತಾರೆ. ನನ್ನ ತಾಯಿಯ ಹೆಸರು ರುಕ್ಮಿಣಿಬಾಯಿ ಇರುತ್ತದೆ.

3. ಹಣಮಂತರವರು ನನ್ನ ತಾಯಿಯ ವಿರುದ್ದ ದಾವೆ ಏಕೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಅವರಿಗೆ ಪಾಲು ಸರಿಯಾಗಿ ಬಂದಿಲ್ಲ ಎಂದು ಸಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ. ಈ ದಾವೆ ಸಲ್ಲಿಸಿದ ನಂತರ ಆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ವಾದಿಯು ಈ ದಾವೆ ಸಲ್ಲಿಸಿದ ನಂತರ ಎಲ್ಲಾ ದಾವೆಗಳು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಸಿ.ಸಿ ಪ್ರಕರಣಗಳು ಇತ್ತು ಎಂದು ಹೇಳುತ್ತಾರೆ. ಯಾವುದೇ ಸಿ.ಸಿ ಕೇಸಿನಲ್ಲಿ ಸುಬ್ಬಮ್ಮ ಇರಲಿಲ್ಲ ಎಂದರೆ ಸಾಕ್ಷಿ ಅವರ ಮಕ್ಕಳು ಇದ್ದರು ಎಂದು ಹೇಳುತ್ತಾರೆ. ಸಿ.ಸಿ ಪ್ರಕರಣದಲ್ಲಿ ನಾನೇ ಫಿರೀಯಾದಿದಾರನಾಗಿದ್ದೆ ಎಂದರೆ ಸರಿ. ಅಂತಿಮ ವರದಿಯಲ್ಲಿ ಸುಬ್ಬಮ್ಮನ ಮಕ್ಕಳನ್ನು ಪೋಲಿಸರು ಕೈ ಬಿಟ್ಟಿದ್ದರು ಎಂದರೆ ಸರಿ. ನನ್ನ ಸಾಕ್ಷಿ ಆದ ನಂತರ ಸುಬ್ಬಮ್ಮನ ಮಕ್ಕಳನ್ನು ಸೇರಿಸಲಾಯಿತು ಎಂದರೆ ಸರಿ. ಎಲ್ಲಾ ಸಿ.ಸಿ ಪ್ರಕರಣಗಳು ಮುಕ್ತಾಯ ಆಗಿರುತ್ತವೆ ಎಂದರೆ ಸರಿ.

4. ನನ್ನ ತಂದೆ ಯಾವ ವರ್ಷದಲ್ಲಿ ಸರಕಾರಿ ನೌಕರರಾಗಿ ಸೇರಿದ್ದರು ಎಂದರೆ ಸಾಕ್ಷಿ 1972 ರಲ್ಲಿ ಸೇರಿದ್ದರು ಎಂದು ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಸರಕಾರಿ ನೌಕರರು ಜಮೀನು ಖರೀದಿ ಮಾಡಬೇಕಾದರೆ ಸರಕಾರದಿಂದ ಅಥವಾ ಸಂಬಂಧ ಪಟ್ಟ ಕಛೇರಿಯಿಂದ ಅನುಮತಿ ಪಡೆಯಬೇಕು ಎಂದರೆ ಸರಿ. ಸರಕಾರಿ ನೌಕರರು ತಮಗೆ ಆಸ್ತಿ ಎಷ್ಟು ಇದೆ ಎಂದು ಘೋಷಣೆ ಮಾಡಬೇಕು ಎಂದರೆ ಸರಿ. 1972 ರಲ್ಲಿ ತಿಂಗಳಿಗೆ ರೂ. 23.60 ಪೈಸೆ ಇತ್ತು ಎಂದರೆ ಸಾಕ್ಷಿ ಪ್ರತಿ ತಿಂಗಳು ರೂ.1800 ಇತ್ತು ಎಂದು ಹೇಳುತ್ತಾರೆ. 1972 ರಿಂದ ಇಲ್ಲಿಯವರೆಗೂ ನನ್ನ ತಂದೆಯ ವೇತನ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ಸರ್ವೆ ನಂಬರ 227 ರಲ್ಲಿ ಜಮೀನು 3 ಖರೀದಿ ಪತ್ರ ಆಗಿದೆ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂಬರ 227 ಜಮೀನು ನನ್ನ ತಂದೆಗೆ ಹೇಗೆ ಬಂತು ಎಂದರೆ ಸಾಕ್ಷಿ ನನ್ನ ತಾಯಿಯ ತಂದೆಯವರು 8 ಎಕರೆ ಜಮೀನು ಕೊಟ್ಟಿದ್ದರು ಮತ್ತು ಅವರ

ವೇತನದಲ್ಲಿ ಉಳಿದ ಹಣದಿಂದ ನನ್ನ ತಂದೆಯು ಸರ್ವೆ ನಂಬರ 227 ನ್ನು ಖರೀದಿ ಮಾಡಿದ್ದರು ಎಂದು ಹೇಳುತ್ತಾರೆ. ಸರ್ವೆ ನಂಬರ 227 ಆಸ್ತಿ ಖರೀದಿ ಮಾಡುವ ಮೊದಲು ನನ್ನ ತಂದೆ ಸರಕಾರದಿಂದ ಅನುಮತಿ ಪಡೆದ ಬಗ್ಗೆ ಅಥವಾ ಖರೀದಿ ಮಾಡಿದ ನಂತರ ಅದರ ಬಗ್ಗೆ ಸರಕಾರಕ್ಕೆ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಎಂದು ಅದರ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲ್ಲಿಸಿಲ್ಲ. ಈ ದಾವೆ ನಮ್ಮ ವಿರುದ್ ಆಗುತ್ತದೆ ಎಂಬ ಉದ್ದೇಶದಿಂದ ನಾವು ಆ ದಾಖಲೆಯನನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 227 ನ್ನು 3 ಖರೀದಿ ಪತ್ರ ಆಗಿದೆ ಗುಂಡಪ್ಪ ಖರೀದಿ ಮಾಡಿದ್ದರು, ನನ್ನ ತಂದೆ ಹಿರಿಯ ಮಗ ಆಗಿದ್ದರಿಂದ ಅವರ ಹೆಸರಿಗೆ ಖರೀದಿ ಮಾಡಿದ್ದರಿಂದ, ನನ್ನ ತಂದೆ ಅದು ಹಿರಿಯ ಆಸ್ತಿ ಇದೆ ಎಂದು ತಿಳಿದಿದ್ದರಿಂದ ಸರಕಾರಕ್ಕೆ ಅದರ ಬಗ್ಗೆ ಯಾವುದೇ ಘೋಷಣೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 227 ನ್ನು ಗುಂಡಪ್ಪ ಖರೀದಿ ಮಾಡಿದ್ದರು ಆದ್ದರಿಂದ ಅದು ಜಂಟಿ ಕುಟುಂಬದ ಆಸ್ತಿ ಆಗಿದ್ದರಿಂದ ನನ್ನ ತಂದೆಯು ಸರಕಾರಕ್ಕೆ ಅದರ ಬಗ್ಗೆ ಯಾವುದೇ ಘೋಷಣೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 227 ರಲ್ಲಿ 9 ಎಕರೆ 20 ಗುಂಟೆ ಮತ್ತು 4 ಎಕರೆ 5 ಗುಂಟೆ ಇದ್ದು ಅದು 3 ಸಲ ರೆಜಿಸ್ಟರ ಆಗಿದೆ ಎಂದು ಹೇಳುತ್ತಾರೆ. ಮೂರು ಖರೀದಿ ಪತ್ರಗಳು ನನ್ನ ತಂದೆಯ ಹೆಸರಿನಲ್ಲಿ ಇವೆ ಎಂದರೆ ಸರಿ. ಸರ್ವೆ ನಂಬರ 186 ಉದಯಕುಮಾರರವರ ಹೆಸರಿನಲ್ಲಿ ಇದೆ, ಅವರಿಗೆ ಹೇಗೆ ಬಂತು ಎಂದರೆ ಸಾಕ್ಷಿ ನನ್ನ ತಂದೆ ಮತ್ತು ನನ್ನ ತಾಯಿಗೆ ಕೊಟ್ಟ ಹೊಲದ ಆದಾಯದಿಂದ ಬಂದಿದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಮೊದಲು ಖರೀದಿ ಮಾಡಿದ ಜಮೀನಿನ ಆದಾಯದಿಂದ ಬಂದಿದೆ ಎಂದು ಹೇಳುತ್ತಾರೆ. ಈ ಆಸ್ತಿ ಖರೀದಿ ಮಾಡುವ ಸಮಯದಲ್ಲಿ ಉದಯಕುಮಾರ ಅಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. ಉದಯಕುಮಾರವರಿಗೆ ಸ್ವಂತ ಆದಾಯ ಇರಲಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಮತ್ತು ನನ್ನ ತಾಯಿಗೆ ಕೊಟ್ಟ ಹೊಲದ

ಆದಾಯದಿಂದ ಬಂದಿದೆ ಎಂದು ಹೇಳುತ್ತಾರೆ. ನನ್ನ ತಂದೆ ಸುಭಾಷಚಂದ್ರರವರು ಇಷ್ಟು ಜಮೀನಿನ ಜಂಟಿ ಮಾಲಿಕರು ಎಂದು ಸರಕಾರಕ್ಕೆ ಘೋಷಣೆ ಪತ್ರ ಕೊಟ್ಟಿದ್ದರೊ ಇಲ್ಲವೊ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.